ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	798
ಸದಸ್ಯರ ಹೆಸರು	ಶ್ರೀ ಮರಿತಿಬ್ಬೇಗೌಡ
ಉತ್ತರಿಸುವ ದಿನಾಂಕ:	11-03-2020
ಉತ್ತರಿಸುವವರು	ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

	ಪ್ರಶ್ನೆ	ಉತ್ತರ
ಅ	ಮುಜರಾಯಿ ಇಲಾಖಾ ವ್ಯಾಪ್ತಿಯಲ್ಲಿನ ತಿರುಪತಿ-ತಿರುಮಲ ಕರ್ನಾಟಕ ವಸತಿ ಗೃಹದ ನಿರ್ವಹಣೆಯನ್ನು ಯಾವ ಇಲಾಖೆಗೆ ವಹಿಸಲಾಗಿದೆ:	ತಿರುಮಲ-ತಿರುಪತಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರದ ವಸತಿ ಗೃಹದ ನಿರ್ವಹಣೆಯನ್ನು ಕರ್ನಾಟಕ ಸರ್ಕಾರದ ವತಿಯಿಂದ ಧಾರ್ಮಿಕ ದತ್ತಿ ಇಲಾಖೆಯಡಿ ನಿರ್ವಹಿಸಲಾಗುತ್ತಿದೆ.
ಆ	ಸದರಿ ವಸತಿ ಗೃಹದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಹೌದು, ಸರ್ಕಾರದ ಗಮನಕ್ಕೆ ಬಂದಿದೆ.
ಇ	ಈ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು:	ಸದರಿ ವಸತಿ ಗೃಹದಲ್ಲಿ ಭಕ್ತಾದಿಗಳ/ಯಾತ್ರಿಕರ ಸೌಲಭ್ಯಕ್ಕಾಗಿ ನಿರಂತರ ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಪೂರೈಕೆ ಮತ್ತು ಬಿಸಿ ನೀರಿನ ವ್ಯವಸ್ಥೆ ಇತ್ಯಾದಿ ಮೂಲಭೂತ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಅಲ್ಲದೆ, ತಿರುಮಲ ಕರ್ನಾಟಕ ಪ್ರವಾಸಿ ಸೌಧದ 86 ಕೊಠಡಿಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿಗಾಗಿ ರೂ.400-00 ಲಕ್ಷಗಳ ಅಂದಾಜುಪಟ್ಟಿಗೆ ಸರ್ಕಾರವು ಆದೇಶ ಸಂಖ್ಯೆ: ಕಂಇ 68 ಮುಅಜಿ 2018 ದಿನಾಂಕ:19.03.2019 ರಂದು ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಕಾಮಗಾರಿ ಅನುಷ್ಠಾನ ಹಂತದಲ್ಲಿರುತ್ತದೆ. ಅಲ್ಲದೆ, ಕರ್ನಾಟಕ ರಾಜ್ಯ ಛತ್ರದ ಜಾಗದಲ್ಲಿ ನೂತನ ವಸತಿ ಗೃಹ, ಕಲ್ಯಾಣ ಮಂಟಪ ನಿರ್ಮಾಣ, ಕಲ್ಯಾಣಿ ದುರಸ್ತಿ, ವಸಂತ ಮಂಟಪ ಉದ್ಯಾನವನ ಹಾಗೂ ಇತ್ಯಾದಿ ಅಭಿವೃದ್ಧಿಗಳನ್ನು ಒಳಗೊಂಡಂತೆ ಮಹಾನಕ್ಷೆ ತಯಾರಿಸಿ ತಿರುಮಲ-ತಿರುಪತಿ ದೇವಸ್ಥಾನದ ಪ್ರಾಧಿಕಾರದವರಿಂದ ಅನುಮತಿ ಪಡೆದು, ನಂತರದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುತ್ತದೆ.
ಈ	ಕರ್ನಾಟಕದ ಭಕ್ತಾಧಿಗಳಿಗೆ ಪಾರದರ್ಶಕವಾಗಿ ಸದರಿ ವಸತಿ ಗೃಹದಲ್ಲಿ ಕೊಠಡಿಗಳು ಲಭ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೆ, ಈಗಾಗಲೇ ತಿರುಮಲದ ಕರ್ನಾಟಕ ರಾಜ್ಯ ಛತ್ರದ ಪ್ರವಾಸಿಸೌಧದಲ್ಲಿ ಕೊಠಡಿಗಳನ್ನು ಪಾರದರ್ಶಕವಾಗಿ ಆನ್-ಲೈನ್ ಮುಖಾಂತರ ಕರ್ನಾಟಕ-ಒನ್ ಸೆಂಟರ್‌ಗಳ ಮೂಲಕ ಕಾಯ್ದಿರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಉ	ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು	ತಿರುಮಲ ಕರ್ನಾಟಕ ರಾಜ್ಯ ಛತ್ರದ ಕರ್ನಾಟಕ ಪ್ರವಾಸಿಸೌಧದಲ್ಲಿ 72 ಸಾಮಾನ್ಯ ಕೊಠಡಿಗಳು, 10 ಹವಾ ನಿಯಂತ್ರಿತ ಕೊಠಡಿಗಳು ಮತ್ತು ಗಣ್ಯವ್ಯಕ್ತಿಗಳಿಗೆ ನೀಡುವ ಹವಾ ನಿಯಂತ್ರಿತ 04 ಕೊಠಡಿಗಳನ್ನು ಒಳಗೊಂಡಂತೆ ಒಟ್ಟು 86 ಕೊಠಡಿಗಳು ಇರುತ್ತದೆ. ಇದರಲ್ಲಿ 40 ಕೊಠಡಿಗಳನ್ನು ಕರ್ನಾಟಕ-ಒನ್ ಮುಖಾಂತರ ಕಾಯ್ದಿರಿಸುವ ವ್ಯವಸ್ಥೆ ಇರುತ್ತದೆ. ಉಳಿದ 46 ಕೊಠಡಿಗಳನ್ನು ಗಣ್ಯಾತಿಗಣ್ಯರು ಹಾಗೂ ಅವರಿಂದ ಶಿಫಾರಸ್ಸು ಪತ್ರಗಳಿಗೆ ಆದ್ಯತೆ ಮೇರೆಗೆ, ಲಭ್ಯತೆಗೆ ಅನುಗುಣವಾಗಿ ಶಿಷ್ಟಾಚಾರದಂತೆ ಕೊಠಡಿಗಳನ್ನು ಹಂಚಿಕೆ ಮಾಡಲಾಗುತ್ತಿದೆ.

(ಸಂಖ್ಯೆಕಂಇ 33 ಮುಸಪ್ರ 2020)

(ಕೋಟಾ ಶ್ರೀನಿವಾಸ ಪೂಜಾರಿ)
ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲ ಸಾರಿಗೆ ಸಚಿವರು.